ಸಮಸ್ಯೆಯಾಗುತ್ತದೆ ಎಂದು ಅವರ ಗಮನಕ್ಕೆ ತಂದಿದ್ದೇನೆ. ಇದನ್ನು ಆರ್‌ಎಡಿಎಫ್- 4ರಲ್ಲಿ ತೆಗೆದುಕೊಳ್ಳುವ ಬಗ್ಗೆ ಗಮನಿಸುತ್ತೇನೆ ಎಂದು ಹೇಳಬಯಸುತ್ತೇನೆ.

ಶ್ರೀ ಬಸವನಗೌಡ ರಾ. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿದ ಹಾಗೆ ಅದು ಬೇಸಿಗೆಯಲ್ಲಿ ಉಪಯುಕ್ತವಾಗುತ್ತದೆ. ಆದರೆ ಅವರು ಕೆಎಸ್‌ಆರ್‌ಟಿಸಿ ಯವರ ವರದಿಯನ್ನು ತರಿಸಿಕೊಂಡರೆ ಅರ್ಥವಾಗುತ್ತದೆ. ಅಲ್ಲಿನ ರಸ್ತೆಯಲ್ಲಿ ಬೇಸಿಗೆಯಲ್ಲಿ ಕೂಡ ಬಸ್‌ಗಳು ಸರಿಯಾಗಿ ಓಡಾಡುತ್ತಾ ಇಲ್ಲ. ಆ ಪ್ರದೇಶದಲ್ಲಿರತಕ್ಕಂಥ, ಸುಮಾರು 15 ಸಾವಿರ ಜನಸಂಖ್ಯೆಯುಳ್ಳ ಮಸಿಗನಾಳ ಗ್ರಾಮ ಮತ್ತು ಸುತ್ತುಮುತ್ತಲಿನ ಗ್ರಾಮಗಳಿಗೆ ಜನರು ಹೋಗಬೇಕಾದರೆ ಬಸವನ ಬಾಗೇವಾಡಿಯ ಮೂಲಕ ಸುಮಾರು 21 ಕಿ.ಮಿ.ಗಳಷ್ಟು ಸುತ್ತು ಹಾಕಿ ಹೋಗಬೇಕಾಗುತ್ತದೆ. ಆದ್ದರಿಂದ ದಯವಿಟ್ಟು ಸರಕಾರದವರು ಇದನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ ನಬಾರ್ಡ್‌ನಲ್ಲಿ ನಾನು ಕೊಟ್ಟಂಥ ಎರಡು ರಸ್ತೆಗಳನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ವಿಚಾರವನ್ನು ಪರಿಶೀಲಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ತುಮಕೂರು ಜಿಲ್ಲೆಯಲ್ಲಿ ಅರಣ್ಯ ಒತ್ತುವರಿ ಸಾಗುವಳಿ ಮಾಡುತ್ತಿರುವ ಬಗರ್‌ಹುಕಂ ಸಾಗುವಳಿದಾರರನ್ನು ಒಕ್ಕಲೆಬ್ಬಿಸುವುದು

383 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಅರಣ್ಯ ಇಲಾಖೆಯು ಹಲವಾರು ವರ್ಷಗಳಿಂದ ಅರಣ್ಯ ಒತ್ತುವರಿ ಸಾಗುವಳಿ ಮಾಡುತ್ತಿರುವ ಬಗರ್‌ಹುಕುಂದಾರರನ್ನು ಒಕ್ಕಲೆಬ್ಬಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಅದನ್ನು ತಡೆಯಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :

ಅ) ಬಂದಿದೆ.

ದಿನಾಂಕ 27-4-78ರ ನಂತರದ ಅತಿಕ್ರಮಣವನ್ನು ಸರ್ಕಾರದ ಆದೇಶ ಸಂಖ್ಯೆ : ಅಪಜೀ 5. ಎಫ್‌ಜಿಎಲ್ 90, ದಿನಾಂಕ 5-5-1997ರ ಪ್ರಕಾರ ಖುಲ್ಲಾ ಪಡಿಸಲಾಗುತ್ತಿದೆ.

ಆ) ತಡೆಯುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ತುಮಕೂರು ಜಿಲ್ಲೆಯಲ್ಲಿ ಅರಣ್ಯ ಇಲಾಖೆಯವರು ಹಲವಾರು ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬಂದಿದ್ದವರನ್ನು ಒಕ್ಕಲು

ಎಬ್ಬಿಸುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದಾಗ ಅದು ಸರಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಅಂತೆಯೇ ಮಾನ್ಯ ಸಚಿವರು 27-4-78ರ ನಂತರ ಅತಿಕ್ರಮಣ ಮಾಡಿದಂಥವರನ್ನು ಮಾತ್ರ ಒಕ್ಕಲೆಬ್ಬಿಸುತ್ತಾ ಇದ್ದೇವೆ ಎಂದು ಹೇಳಿದ್ದಾರೆ. ಈ ಉತ್ತರವನ್ನು ಕೊಡುವಾಗ ಮಾನ್ಯ ಸಚಿವರ ಹತ್ತಿರ ಪೂರ್ಣ ಮಾಹಿತಿ ಇರಲೇ ಬೇಕು. 27-4-78ರ ಪೂರ್ವದಲ್ಲಿ ಎಷ್ಟು ಜನ ಮತ್ತು ಎಷ್ಟು ಎಕರೆ ಭೂಮಿಯನ್ನು ಸಾಗುವಳಿ ಮಾಡಿಕೊಂಡು ತುಮಕೂರು ಜಿಲ್ಲೆಯಲ್ಲಿ ಇದ್ದಾರೆ? ಅಂತೆಯೇ 27-4-78ರ ನಂತರ ಜಿಲ್ಲೆಯಲ್ಲಿ ಎಷ್ಟು ಜನರು ಮತ್ತು ಎಷ್ಟು ಎಕರೆ ಪ್ರದೇಶವನ್ನು ಅತಿಕ್ರಮಣ ಸಾಗುವಳಿ ಮಾಡಿಕೊಂಡು ಇದ್ದಾರೆ ಎಂಬುದನ್ನು ತಿಳಿಸಬೇಕು ಹಾಗೆಯೇ 27-4-78ರ ನಂತರ ಅತಿಕ್ರಮಣ ಮಾಡುತ್ತಿದ್ದವರನ್ನು ಮಾತ್ರ ನಿಮ್ಮ ಅಧಿಕಾರಿಗಳು ಒಕ್ಕಲೆಬ್ಬಿಸುತ್ತಿದ್ದಾರೆಯೇ ಎಂಬುದನ್ನು ತಿಳಿಸಬೇಕಾಗಿ ಕೋರುತ್ತೇನೆ.

ಶ್ರೀ ಡಿ. ಮಂಜುನಾಥ್ : ಮಾನ್ಯ ಅಧ್ಯಕ್ಷರೇ, 27-4-78ರ ನಂತರ ಯಾರು ಅತಿಕ್ರಮಣ ಸಾಗುವಳಿ ಮಾಡುತ್ತಿದ್ದಾರೋ ಅವರನ್ನು ಒಕ್ಕಲೆಬ್ಬಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಅದಕ್ಕಿಂತ ಹಿಂದೆ ಯಾರು ಸಾಗುವಳಿ ಮಾಡಿಕೊಂಡಿದ್ದಾರೆ, ಅಂಥವರನ್ನು ಖಾಯಂ ಮಾಡಲು ಕೇಂದ್ರ ಸರಕಾರದವರು ಅನುಮತಿ ಕೊಟ್ಟಿದ್ದಾರೆ. ಹಾಗೆಯೇ ಅವರು ಕೊಟ್ಟ ಗೈಡ್‌ಲೈನ್ಸ್ ಪ್ರಕಾರ ಗ್ರಾಂಟ್ ಮಾಡಲು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. 27-4-78 ರಿಂದ ಈಚೆಗೆ ಅತಿಕ್ರಮ ಸಾಗುವಳಿ ಮಾಡುತ್ತಿರುವವರನ್ನು ಒಕ್ಕಲೆಬ್ಬಿಸಲು ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ : ಹೀಗೆ ಒಕ್ಕಲೆಬ್ಬಿಸಲು ನಿಮಗೆ ಇರುವ ಆಧಾರಗಳೇನು? 1978ರ ನಂತರ ಅಥವಾ ಪೂರ್ವದಲ್ಲಿ ಇಂಥವರು ಮಾಡುತ್ತಿದ್ದಾರೆ ಎಂದು ನಿಮ್ಮಲ್ಲಿ ಆಧಾರ ಏನಿದೆ? ನಾನು ಒಂದು ನಿದರ್ಶನವನ್ನು ಕೊಡುತ್ತೇನೆ. ನಮ್ಮ ನಿಮ್ಮ ಗಡಿಯಲ್ಲಿ ಬರತಕ್ಕಂಥ ರಂಗನಾಥಪುರ, ವಡ್ಡನಹಳ್ಳಿ, ಬುಕ್ಕಾಪಟ್ಟಣ, ದಾಸಪ್ಪನಹಳ್ಳಿ ಗಳಲ್ಲಿರತಕ್ಕಂಥ ಸರ್ವೇ ನಂಬರ್‌ಗಳಲ್ಲಿ ನಿಮ್ಮ ಕಂದಾಯ ಇಲಾಖೆಯ ದಾಖಲೆಗಳ ಪ್ರಕಾರ ಅದು ಕಂದಾಯ ಇಲಾಖೆಯ ಜಮೀನಾಗಿಯೇ ಇದೆ. ಅದು ಅರಣ್ಯಭೂಮಿ ಎಂದು ಕೂಡ ರೆವಿನ್ಯೂ ರೆಕಾರ್ಡ್ಸ್‌ನಲ್ಲಿಲ್ಲ. ಅಂಕಿಅಂಶ ಇರತಕ್ಕಂಥಾದ್ದು ಫಾರೆಸ್ಟ್‌ನವರ ಇಲಾಖೆಯಲ್ಲಿ ಅದು ರೈತರಿಗೆ ಹೇಗೆ ಗೊತ್ತಾಗುತ್ತದೆ? ಹೀಗಿರುವಾಗ ಯಾವ ಆಧಾರದ ಮೇಲೆ ನೀವು ಒಕ್ಕಲೆಬ್ಬಿಸುತ್ತಿದ್ದೀರಿ? ನೀವು ಇಲ್ಲಿ ಉತ್ತರ ಕೊಡುವಾಗ ಅಧಿಕಾರಿಗಳ ಕೊಟ್ಟ ಅಂಕಿಅಂಶಗಳನ್ನು ನಂಬಬೇಡಿರಿ. ಉದಾಹರಣೆಗೆ ರಂಗನಾಥಪುರದ ಸರ್ವೇನಂಬರ್ ಒಂದರಲ್ಲಿಯೇ ಸುಮಾರು 600-700 ಎಕರೆಗಳಷ್ಟು ಸಾಗು ಆಗಿದೆ. ಇವೊತ್ತು ರೈತರಿಗೆ ಪಹಣಿ ಮುಂತಾಗಿ ಯಾವುದೇ ತರಹದ ರೆಕಾರ್ಡ್ಸ್ ರೈತರ ಹತ್ತಿರ ಇಲ್ಲ. ಆದರೆ ಅಲ್ಲಿ ಹಾಕಿರತಕ್ಕಂಥ ತೆಂಗಿನ ಗಿಡಗಳು ಫಸಲು ಬಿಡುತ್ತಾ ಇವೆ. ಇದು 40-50ವರ್ಷಗಳಿಂದ ನಡೆದು ಬಂದಿದೆ. ಅಂಥವರನ್ನು ಕೂಡ ಒಕ್ಕಲೆಬ್ಬಿಸಲು ಹೊರಟಿದ್ದಾರೆ. ಇಲಾಖೆಯವರು ಬೌಂಡ್ರಿಟ್ರೆಂಚ್ಸ್ ಹೊಡೆಯಲು ಸಾಕಷ್ಟು ಹಣವನ್ನು ಪಡೆದಿದ್ದಾರೆ. ಆದರೆ ಇಲಾಖೆಯವರು ಆ ಒಂದು ನೆಪದಲ್ಲಿ ಅಲ್ಲಿ ಹೋಗಿ ಎಲ್ಲರನ್ನೂ ಒಕ್ಕಲೆಬ್ಬಿಸುವ ಕೆಲಸವನ್ನು ಮಾಡುತ್ತಿದ್ದಾರೆ. ನನ್ನ ಕ್ಷೇತ್ರದಲ್ಲಿಯೇ ಸಾವಿರಾರು ಎಕರೆ ಪ್ರದೇಶದಲ್ಲಿನ ಜನರನ್ನು ಒಕ್ಕಲೆಬ್ಬಿಸುವ ಕೆಲಸವನ್ನು ಮಾಡಿದ್ದಾರೆ. ಪ್ರತಿನಿಧಿಯಾಗಿ ನಾನು ರೈತರನ್ನು

ಎದುರು ಹಾಕಿಕೊಳ್ಳುವಂಥ ಕೆಲಸವನ್ನು ಮಾಡಿದ್ದಾರೆ. ಆದ್ದರಿಂದ ತಾವುಗಳು ಒಂದು ಆಶ್ವಾಸನೆಯನ್ನು ಕೊಡಬೇಕು. ಅಲ್ಲಿ 40-50ವರ್ಷಗಳಿಂದ ಸಾಗು ಮಾಡಿಕೊಂಡಿರುವವರನ್ನು ಒಕ್ಕಲೆಬ್ಬಿಸುವುದಿಲ್ಲ ಎಂದು ಹೇಳಬೇಕು.

ಶ್ರೀ ಡಿ. ಮಂಜುನಾಥ್ : ಮಾನ್ಯ ಅಧ್ಯಕ್ಷರೇ, ನಾನು ಎಲ್ಲಾ ವಿವರಗಳನ್ನು ಕೊಟ್ಟಿದ್ದೇನೆ. 27-4-78ರ ಪೂರ್ವದಲ್ಲಿ ಎಷ್ಟು ವಿಸ್ತೀರ್ಣ ಇತ್ತು ಎಂದು ಕೊಟ್ಟಿದ್ದೇವೆ. ಅದರ ನಂತರ ಎಷ್ಟು ಆಗಿದೆ ಎಂಬುದನ್ನು ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಹೇಳುವ ಪ್ರಕಾರ ಅವರ ಹತ್ತಿರ ಯಾವುದೇ ದಾಖಲೆಗಳು ಇಲ್ಲ. ರೆವಿನ್ಯೂ ದಾಖಲೆಗಳಲ್ಲಿ ಅರಣ್ಯ ಎಂದು ಬರೆದಿದ್ದರೆ ಅದು ಅರಣ್ಯ ಇಲಾಖೆಗೆ ಸೇರುತ್ತದೆ. ಒಂದು ವೇಳೆ ಅರಣ್ಯ ಎಂದು ಇಲ್ಲದಿದ್ದರೆ ಅದನ್ನು ತರಿಸಿಕೊಂಡು ಪರಿಶೀಲನೆ ಮಾಡೋಣ. ಮಾನ್ಯ ಸದಸ್ಯರು ಬಂದರೆ ನಮ್ಮ ಅಧಿಕಾರಿಗಳನ್ನು ಕರೆಸಿಕೊಂಡು ಚರ್ಚೆ ಮಾಡೋಣ. ಅಲ್ಲಿ ಯಾರನ್ನು ಒಕ್ಕಲೆಬ್ಬಿಸ ಬಾರದು ಎಂಬ ಬಗ್ಗೆ ತೀರ್ಮಾನ ಮಾಡೋಣ.

ಅಧ್ಯಕ್ಷರು : ನೀವುಗಳು ಕುಳಿತು ಚರ್ಚೆ ಮಾಡಿ ತೀರ್ಮಾನಕ್ಕೆ ಬರುವುದು ಒಳ್ಳೆಯ ವ್ಯವಸ್ಥೆ. ಅದನ್ನು ಮಾಡಿ.

ತಡಿ ಹಿಡಿಯಲಾದ ಪ್ರಶ್ನೆ : ಚು. ಗು. ಪ್ರ : ಸಂಖ್ಯೆ -241 (1439)

ಅಧ್ಯಕ್ಷರು : ಈ ಪ್ರಶ್ನೆಗೆ ಉತ್ತರಿಸಲು ಮಾನ್ಯ ಸಚಿವರು ಸಮಯವನ್ನು ಕೋರಿದ್ದಾರೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಇದು ಎರಡನೇ ಸಾರಿ ಹೆಲ್ಡ್‌ಓವರ್ ಕ್ವೊಶ್ಚನ್ ಆಗಿರುವುದು.

ಅಧ್ಯಕ್ಷರು : ನಾನೇನು ಮಾಡಲಿ? ಲೋಕೋಪಯೋಗಿ ಸಚಿವರು ಸಮಯ ಕೇಳಿದ್ದಾರೆ 15ನೇ ತಾರೀಖಿನೊಳಗಾಗಿ ಉತ್ತರವನ್ನು ಕೊಡುತ್ತೇವೆಂದು ಹೇಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ತಾವುಗಳು ನಾನೇನು ಮಾಡಲಿ ಎಂದು ಹೇಳಿದರೆ ನಮ್ಮ ರಕ್ಷಣೆ ಮಾಡುವವರು ಯಾರು? ತಾವುಗಳು ಹೀಗೆ ಅಸಹಾಯಕತನ ತೋರಿಸಿದರೆ ನಮಗೆ ಕಷ್ಟವಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ತಾವುಗಳು ತಮ್ಮ ಅಸಹಾಯಕತನವನ್ನು ಇವೊತ್ತಿನಿಂದ ತೋರಿಸುತ್ತಿದ್ದೀರಿ. ಅದು ನಮಗೆ ಅರ್ಥವಾಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಅಸಹಾಯಕತೆಗೆ ಕಾರಣ ಏನು? ಅದನ್ನು ತಾವು ಸದನದಲ್ಲಿ ಹೇಳಿಬಿಡಿ. ಇದು ಆ ಮೇಲೆ ಮಾತನಾಡುವ ವಿಚಾರವಲ್ಲ.

ಅಧ್ಯಕ್ಷರು : ಇದು ಪ್ರಶ್ನೋತ್ತರದ ಸಮಯ. ಈಗಾಗಲೇ ಸಮಯ ಮೀರಿದೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ನನಗೆ ಒಂದು ಸಪ್ಲಿಮೆಂಟರಿಗಾದರೂ ಅವಕಾಶ ಕೊಡಿ.